## ವೀಕ್ಷಕರ ಮೇಲೆ ದಾಳಿ ಮಾಡದಿರಿ

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯ ಕಥೆ ಎತ್ತೆತ್ತಲೋ ಸಾಗಿ ಇದೀಗ ಮುಂದೆ ಏನಪ್ಪಾ ಎಂದು ಕವಲು ದಾರಿಯಲ್ಲಿ ಬಂದು ನಿಂತಿದೆ. ಇದರಲ್ಲಿ ಕೆಲವು ದಿನಗಳಿಂದ ನಾರಾಯಣಾಚಾರ್ಯರ ಇಬ್ಬರು ಸೊಸೆಯಂದಿರಲ್ಲಿ ಯಾರು ಮೊದಲು ಮಗುವನ್ನು ಹೆರುವುದು ಎಂಬ ವಿಷಯದಲ್ಲಿ ಪೈಪೋಟಿ ನಡೆದಿದೆ! ಕಥೆಯನ್ನು ಎಳೆಯಲು ರಾಮಾಚಾರಿಯ ತದ್ರೂಪಿ ರೌಡಿಯೊಬ್ಬನ ಪಾತ್ರವನ್ನು ಸೃಷ್ಟಿಸಿ ಪರಿಚಯಿಸಲಾಗಿದೆ. ಈ ತಂತ್ರವನ್ನು ನೋಡಿದರೆ ಅನಾಯಾಸವಾಗಿ ಇನ್ನೂ ಹಲವು ನೂರು ಕಂತುಗಳ ಮೂಲಕ ವೀಕ್ಷಕರನ್ನು ಕೊಲ್ಲಬಹುದು ಎಂದು ನಿರ್ಮಾಣ ತಂಡ ಯೋಜಿಸಿದಂತೆ ಕಾಣುತ್ತಿದೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಬ್ರೇಕಿಂಗ್ ನ್ಯೂಸ್ ಫಜೀತಿ

ಡಿಸೆಂಬರ್ ಒಂದರಂದು ಬೆಳಿಗ್ಗೆ ಸುದ್ದಿ ಮಾಧ್ಯಮಗಳನ್ನು ನೋಡಿದಾಗ ಅವರ ಸಾಮಾಜಿಕ ಕಳಕಳಿಯ ಉದ್ಧಟತನ ಎದ್ದು ಕಾಣುತ್ತಿತ್ತು. ಅಂದಿನ ಪ್ರಮುಖ ಸುದ್ದಿ ಹಲವು ಶಾಲೆಗಳಲ್ಲಿ ಬಾಂಬ್ ಇರಿಸಿರುವ ಹುಸಿ ಬೆದರಿಕೆ. ಅದೇ ಅವರಿಗೆ ಬ್ರೇಕಿಂಗ್ ನ್ಯೂಸ್ ಆಗಿತ್ತು. ಅದಕ್ಕಿಂತ ಹೆಚ್ಚಿನದಾಗಿ ವರದಿಗಾರರು ಶಾಲೆಗಳ ಬಳಿ ನಿಂತು ಸಣ್ಣ ಮಕ್ಕಳನ್ನು ಕರೆದು ಅಭಿಪ್ರಾಯವನ್ನು ಪಡೆಯುತ್ತಿದ್ದ ದೃಶ್ಯ ನೋಡಿ ಏನು ಹೇಳಬೇಕೋ ತಿಳಿಯದಾಗಿತ್ತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಬಾಲಿಶ ಟಾಸ್ಕ್‌ಗಳು

ಕಲರ್ಸ್ ಕನ್ನಡದ 'ಬಿಗ್ ಬಾಸ್'ನಲ್ಲಿ ನೀಡುತ್ತಿರುವ ಟಾಸ್ಕ್‌ಗಳು ತುಂಬಾ ಬಾಲಿಶವಾಗಿವೆ. ಚಿಕ್ಕ ಮಕ್ಕಳಿಗೆ ಸೂಕ್ತ ಆಗುವಟಾಸ್ಕ್‌ಗಳನ್ನು ದೊಡ್ಡವರಿಗೆ ನೀಡಲಾಗುತ್ತಿದೆ. ನಾಯಿ, ಬೆಕ್ಕುಗಳಾಗುವುದು ರಾಕ್ಷಸರಾಗುವುದು, ಒಬ್ಬರ ಮೇಲೆ ಇನ್ನೊಬ್ಬರು ಬಿದ್ದು ಬಡಿದಾಡುವುದರಿಂದ ಏನು ಪ್ರಯೋಜನ?

ಈ ಸಲ ಬಿಗ್ ಬಾಸ್‌ನಲ್ಲಿ ಭಾಗವಹಿಸಿದವರೆಲ್ಲ ತುಂಬಾ ಕ್ರೂರವಾಗಿ ವರ್ತಿಸುತ್ತಿದ್ದಾರೆ. ಕಾರ್ಯಕ್ರಮದ ಮೂಲ ಉದ್ದೇಶವೇ ಇಲ್ಲಿ ಈಡೇರುತ್ತಿಲ್ಲ ಯಾವಾಗಲೂ ಜಗಳ ಕಾಯುವುದೇ ಹೆಚ್ಚಾಗಿದೆ. ನೀಡುವ ಟಾಸ್ಕ್ ಪ್ರಯೋಜನಕಾರಿಯಾಗಿರಲಿ.

—ಮುರಲೀಧರ ಕುಲಕರ್ಣಿ, ಬೀದರ್

ವಾರದ ಪತ್ರ

## ಶಾಸ್ತ್ರಕ್ಕೆ ವಿವೇಕದ ಸ್ಪರ್ಶ



ಕಲರ್ಸ್ ಕನ್ನಡದ 'ಬೃಂದಾವನ'ದಲ್ಲಿ ಕೂಡು ಕುಟುಂಬಕ್ಕೆ ಸೊಸೆಯಾಗಿ ಆಗಮಿಸುತ್ತಿರುವ ಪುಷ್ಪಾಳನ್ನು ಮನೆ ತುಂಬಿಸುವ ಶಾಸ್ತ್ರದಲ್ಲಿ ಅಜ್ಜಮ್ಮ, ಮನೆಯ ಹೊಸಿಲ ಮೇಲೆ ಇಟ್ಟಿದ್ದ ಅಕ್ಕಿ, ಬೆಲ್ಲ ಸೇರನ್ನು ಬಲಗಾಲಲ್ಲಿ ಒದ್ದು ಬಲಗಾಲು ಇಟ್ಟು ಮನೆಯೊಳಗೆ ಬರಲು ಹೇಳುತ್ತಾರೆ. 'ಸೊಸೆಯಾಗಿ ಬಂದಿರುವ ನಾನು ಶಾಂತಿ, ನೆಮ್ಮದಿ, ಸಂತೋಷ ಈ ಮನೆಯ ತುಂಬ ಚೆಲ್ಲುವ ಹಾಗಾಗಲಿ ಎಂದು ಆಶಿಸುವೆ. ನಾವು ರೈತರು, ಬೆವರು ಸುರಿಸಿ ಭತ್ತ ಬೆಳೆಯುತ್ತೇವೆ. ಹಸಿದಾಗ ಹೊಟ್ಟೆ ತುಂಬಿಸುವ ಈ ಧಾನ್ಯ ನಮಗೆ ದೇವರ ಸಮಾನ. ಇದನ್ನು ನಾವು ಯಾವತ್ತೂ ಒದೆಯುವುದಿಲ್ಲ. ಒಂದು ಕಾಳು ಹತ್ತು ತೆನೆಯಾಗಲಿ ಎಂದೇ ಕಾಳನ್ನು ಭೂಮಿಗೆ ಚೆಲ್ಲುತ್ತೇವೆ. ಹಾಗೆಯೇ ಈ ಮನೆಯ ಸಂತೋಷವೂ ಹುಲುಸಾಗಲಿ' ಎಂದು ಹೇಳುತ್ತಾ ಹೊಸಿಲಲ್ಲಿ ಇಟ್ಟ ಸೇರು, ಬೆಲ್ಲವನ್ನು ಎತ್ತಿಕೊಂಡು ನಮಸ್ಕರಿಸಿ ಲಕ್ಷ್ಮಿ ಸ್ವರೂಪಿ ಅಕ್ಕಿಯನ್ನು ಮನೆಯ ತುಂಬ ಎರಚುತ್ತಾಳೆ. ಶಾಸ್ತ್ರಕ್ಕೆ ವಿವೇಚನಾ ವಿವರಣೆ ನೀಡಿದ್ದು ಶ್ಲಾಘನೀಯ.

—ಅನುರಾಧ ಟಿ., ದಾವಣಗೆರೆ

## ಮನಮಿಡಿದ ನೃತ್ಯ ಸಾಧಕಿ



ಚಂದನದ 'ವಾರದ ಅತಿಥಿ' ಉತ್ತಮ ಕಾರ್ಯಕ್ರಮ. ಅದರಲ್ಲಿ ಭರತನಾಟ್ಯ, ಕೂಚುಪುಡಿ, ಕಥಕ್ಕಳಿ, ಮೋಹಿನಿಯಾಟ್ಟಂ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡುತ್ತಿರುವ ವಿದುಷಿ ಉಷಾ ದಾತಾರ್ ಅವರ ಸಂದರ್ಶನ ತುಂಬಾ ಚೆನ್ನಾಗಿ ಮೂಡಿಬಂತು. ಅವರು ಕೇರಳದ ಗುರುಕುಲ, ಆಂಧ್ರಪ್ರದೇಶದಲ್ಲಿ ದೇವಾಲಯ ನೃತ್ಯ ಕಲಿತ ಬಗೆಯನ್ನು ತಿಳಿಸಿದರು. 1963–64ರಲ್ಲಿ ಇಂಡೊ ಚೀನಾ ಯುದ್ಧದ ಸಮಯದಲ್ಲಿ ಭಾರತ ಸೈನಿಕರಿಗಾಗಿ ಹಮ್ಮಿಕೊಂಡಿದ್ದ ನೃತ್ಯ ಪ್ರದರ್ಶನ ಕುರಿತು ಅವರು ನೀಡಿದ ವಿವರ ಕೇಳಲು ತುಂಬಾ ಚೆನ್ನಾಗಿತ್ತು.

—ವೀಣಾ ಶಂಕರ್, ಬೆಂಗಳೂರು

## ಹಳ್ಳಿಮಕ್ಕಳ ಹಾಡು-ಪಾಡು

ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮದಲ್ಲಿ ಶಾಸ್ತ್ರೀಯವಾಗಿ ಸಂಗೀತ ಕಲಿಯದ ರಮೇಶ್ ಲಮಾಣಿ ಹಾಗೂ ನಾಗರಾಜ್ ತೊಂಬ್ರಿ ಇವರು ಸಂತ ಶಿಶುನಾಳ ಶರೀಫರ 'ತರವಲ್ಲ ತಗಿ ನಿನ್ನ ತಂಬೂರಿ' ಎಂಬ ಪದವನ್ನು ಮನಮುಟ್ಟುವಂತೆ ಹಾಡಿದರು. ಈ ಕಾರ್ಯಕ್ರಮ ವರ್ಷವಿಡೀ ನಡೆಯಲಿ ಎಂಬುದು ನಮ್ಮ ಆಸೆ. ಅಂತೆಯೇ 'ಡ್ರಾಮಾ ಜೂನಿಯರ್ಸ್' ಮಕ್ಕಳು ಮನಮೋಹಕವಾಗಿ ಅಭಿನಯಿಸುತ್ತಿದ್ದಾರೆ. ಇದು ಸದಭಿರುಚಿ ಕಾರ್ಯಕ್ರಮ. ದೊಡ್ಡವರ ಪಾತ್ರಗಳನ್ನು ನಿರ್ವಹಿಸುವ ಮಕ್ಕಳು ದೊಡ್ಡ ದೊಡ್ಡ ಡೈಲಾಗ್‌ಗಳನ್ನು ನೆನಪಿಟ್ಟುಕೊಳ್ಳುವುದು ಸುಲಭದ ಮಾತಲ್ಲ. ಝೀ ಕನ್ನಡ ಮಕ್ಕಳಿಗಾಗಿ ಉತ್ತಮ ಕಾರ್ಯಕ್ರಮಗಳನ್ನು ರೂಪಿಸಿದೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

## ಸತ್ಯಭಾಮಾಳ ಭಾವಬಿಂಬ

ಝೀ ಕನ್ನಡ 'ಡ್ರಾಮಾ ಜೂನಿಯರ್ಸ್'ನ 'ಸತ್ಯಭಾಮಾ ಗರ್ವಭಂಗ' ಕಿರುನಾಟಕವನ್ನು ಮಕ್ಕಳು ತುಂಬಾ ನೈಜವಾಗಿ ಅಭಿನಯಿಸಿದರು. ಕೃಷ್ಣ, ರುಕ್ಮಿಣಿ, ಸತ್ಯಭಾಮಾ, ನಾರದ ಪಾತ್ರಧಾರಿಗಳು ವೀಕ್ಷಕರ ಪ್ರಶಂಸೆಗೆ ಪಾತ್ರರಾದರು. ನಾರದನ ಪಾತ್ರಧಾರಿ ಏಕೋ ಪೆಚ್ಚಾಗಿ ನಿಂತುಬಿಟ್ಟ. ಸತ್ಯಭಾಮಾ ಗರ್ವಭಂಗ ಮಾಡುವಲ್ಲಿ ಇವನೇ ಪ್ರಮುಖ. ನಾರದನ ಮಾತಿನ ವೈಖರಿ, ಅಭಿನಯ, ಚೆನ್ನಾಗಿ ಮೂಡಿಬಂದಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಶುಭ ತಿರುವು ನೀಡಿದರೆ ಮಸ್ತಾದೀತು

ಕಲರ್ಸ್‌ನ 'ಶ್ರೀರಸ್ತು ಶುಭಮಸ್ತು'ನಲ್ಲಿ ದತ್ತಣ್ಣನವರ ಮೊಮ್ಮಗಳು ಸಂಧ್ಯಾ ತನ್ನ ತಾತನನ್ನು ಏಕವಚನದಲ್ಲಿ ತಾತ್ಸಾರದಿಂದ ಕರೆಯುವುದು ಸರಿಯಲ್ಲ. ಹಿರಿಯರಿಗೆ ಗೌರವ ಸಂಭೋದನೆಯನ್ನು ಮಕ್ಕಳಿಗೆ ಕಲಿಸಬೇಕೆ ವಿನಃ ಅಹಂಕಾರ ನಡವಳಿಕೆಯನ್ನಲ್ಲ. ಇತ್ತೀಚೆಗೆ ಮಾಧವ್ ಅವರ ಕೆಫೆ ಕತೆ ಏನಾಯಿತು? ಬೇರೆ ಧಾರಾವಾಹಿಗಳಿಗಿಂತ ಭಿನ್ನವಾಗಿ ಶುರುವಾಗಿದೆ ಎನ್ನುವ ಕುತೂಹಲವನ್ನು ಇದು ಗಳಿಸಿತ್ತು. ಕಾಲಕ್ರಮೇಣ ಇದೂ ಹತ್ತರಲ್ಲಿ ಮತ್ತೊಂದು ಎನ್ನುವಂತೆ ಅದೇ ನಾಟಕೀಯ ತಿರುವು ಪಡೆದುಕೊಂಡಿದೆ.

—ಅರುಣ್ ಕೆ.ಎಸ್., ಬೆಂಗಳೂರು